ರಾಮಲಿಂಗಾ ರೆಡ್ಡಿ
ಸಾರಿಗೆ ಸಚಿವರು ಹಾಗೂ
ಜಿಲ್ಲಾ ಉಸ್ತುವಾರಿ ಸಚಿವರು, ಬೆಂಗಳೂರು

ದೂರವಾಣಿ : (ಕ) : 22371240
22034010
ನಿವಾಸ : 22237240
ಕೊಠಡಿ ಸಂಖ್ಯೆ: 141, 142
ಮೊದಲನೇ ಮಹಡಿ, ವಿಕಾಸ ಸೌಧ
ಬೆಂಗಳೂರು

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಪಿ.ಎಸ್ (3) 642 15-16
17/08/15
COMMISSIONER
Bruhat Bangalore Mahanagara Palike.

ಸಂಖ್ಯೆ :ಸಾಸ/ಟಿ/ 1353 /2015

ದಿನಾಂಕ: 04/08/2015

ಟಿಪ್ಪಣಿ

ದಿನಾಂಕ: 03-08-2015 ರ ಉದಯ ವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯ ತುಣಕನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ **"ಟೆಲಿಕಾಂ ಕಂಪನಿಗಳ ಬಗ್ಗೆ ಬಿಬಿಎಂಪಿ ಮೃದು, ಅನಧಿಕೃತ ಕೇಬಲ್ ಪ್ರಮಾಣ ಘೋಷಿಸಿಕೊಳ್ಳದ ಕಂನಿಗಳು, ಗಡುವು ಮುಗಿದರೂ ಕ್ರಮ ಕೈಗೊಳ್ಳದ ಪಾಲಿಕೆ"**ಎಂಬ ಶೀರ್ಷಿಕೆತ್ತ ತಮ್ಮ ಗಮನವನ್ನು ಸೆಳೆದಿದೆ.

ಪ್ರಧಾನ ಅಭಿಯಂತರರ ಸಂಖ್ಯೆ PR/1434/2015
ದಿನಾಂಕ 18/8/2015
ಬಿಬಿಎಂಪಿ, ಬೆಂಗಳೂರು

ಸದರಿ ದಿನ ಪತ್ರಿಕೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಒಎಫ್‌ಸಿ ಕೇಬಲ್ ಅಳವಡಿಸಲಾಗಿದ್ದು, ವಾರ್ಷಿಕ ನೆಲ ಬಾಡಿಗೆ ದರ ಪಾಲಿಕೆಗೆ ಬರಬೇಕಾಗಿದ್ದು, ಅನಧಿಕೃತ ಕೇಬಲ್‌ಗಳ ಪ್ರಮಾಣ ಘೋಷಿಸಿಕೊಳ್ಳಲು ಟೆಲಿಕಾಂ ಕಂಪನಿಗಳಿಗೆ ನೀಡಿದ್ದ ಗಡುವು ಮುಗಿದಿದ್ದರೂ ಬಿಬಿಎಂಪಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಈ ಬಗ್ಗೆ ವಿವರವಾಗಿ ಸುದ್ದಿಯನ್ನು ಪ್ರಕಟಿಸಿರುತ್ತಾರೆ.

ಆದ್ದರಿಂದ, ಸದರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯತ್ತ ಕೂಡಲೇ ಗಮಹರಿಸಿ ವರದಿಯನ್ನು ಸಲ್ಲಿಸಲು ಕೋರಿದೆ.

CE (OFC)

(ರಾಮಲಿಂಗಾ ರೆಡ್ಡಿ)

ಆಡಳಿತಗಾರರ ಕಛೇರಿ
ಸಂಖ್ಯೆ 3982
ದಿನಾಂಕ 13/8/2015
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಡಳಿತಗಾರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು

CHIEF ENGINEER OFC CELL
BBMP
No. 251
Date 26/08/15
Bruhat Bangaluru Mahanagara Palike

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
18/8/15

ಆಡಳಿತಗಾರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು
17/8

ಬೃಹತ್ ಬೆಂಗಳೂರು ... ಬೆಂಗಳೂರು
EE (OFC)
26/8
AEE (OFC) - ① ②
26/8/15
2/26/8

3 AUG 2015 ಉದಯವಾಣಿ

# ಟೆಲಿಕಾಂ ಕಂಪನಿಗಳ ಬಗ್ಗೆ ಬಿಬಿಎಂಪಿ ಮೃದು

## ■ ಅನಧಿಕೃತ ಕೇಬಲ್ ಪ್ರಮಾಣ ಘೋಷಿಸಿಕೊಳ್ಳದ ಕಂಪನಿಗಳು ■ ಗಡುವು ಮುಗಿದರೂ ಕ್ರಮಕೈಗೊಳ್ಳದ ಪಾಲಿಕೆ

■ ಶ್ರೀಕಾಂತ್ ಗೌಡಸಂದ್ರ

**ಬೆಂಗಳೂರು:** ಅನಧಿಕೃತ ಒಎಫ್‌ಸಿ ಕೇಬಲ್ ಮೂಲಕ ಪಾಲಿಕೆಗೆ ಕೋಟ್ಯಂತರ ರೂ. ವಂಚಿಸುತ್ತಿರುವ ಖಾಸಗಿ ಟೆಲಿಕಾಂ ಹಾಗೂ ಇಂಟರ್‌ನೆಟ್ ಸೇವಾ ಕಂಪನಿಗಳ ಮೇಲೆ ಬಿಬಿಎಂಪಿ ತನ್ನ ಮೃದು ಧೋರಣೆ ಮುಂದುವರಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 50 ಸಾವಿರ ಕಿ.ಮೀ. ಗೂ ಹೆಚ್ಚು ಅನಧಿಕೃತ ಒಎಫ್‌ಸಿ (ಆಪ್ಟಿಕಲ್ ಫೈಬರ್ ಕೇಬಲ್). ಹಾಗೂ 7 ಸಾವಿರ ಕಾಪರ್ ಕೇಬಲ್ ಅಳವಡಿಸಲಾಗಿದೆ. ಇದು ಅನಧಿಕೃತವಾಗಿರುವುದರಿಂದ ವಾರ್ಷಿಕ ನೆಲ ಬಾಡಿಗೆ ದರ ರೂಪದಲ್ಲಿ ಪಾಲಿಕೆಗೆ ಬರಬೇಕಿದ್ದ ಸಾವಿರಾರು ಕೋಟಿ ರೂ. ವಂಚನೆಯಾಗುತ್ತಿದೆ. ಈ ಬಗ್ಗೆ ಅನಧಿಕೃತ ಕೇಬಲ್‌ಗಳ ಪ್ರಮಾಣ ಘೋಷಿಸಿಕೊಳ್ಳಲು ಟೆಲಿಕಾಂ ಕಂಪನಿಗಳಿಗೆ ನೀಡಿದ್ದ ಗಡುವು ಮುಗಿದಿದ್ದರೂ ಬಿಬಿಎಂಪಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

ನಗರದಲ್ಲಿರುವ ಅನಧಿಕೃತ ಒಎಫ್‌ಸಿ ಪರಿಶೀಲನೆಗೆ ಬಿಬಿಎಂಪಿ ಸಮಿತಿ ರಚಿಸಿತ್ತು. ಸಮಿತಿ ಶಿಫಾರಸಿನಂತೆ ಅನಧಿಕೃತ ಕೇಬಲ್‌ಗಳನ್ನು ಕಂಪನಿಗಳು ಘೋಷಣೆ ಮಾಡಿಕೊಂಡು ದಂಡ ಪಾವತಿಸಿದರೆ ಸಕ್ರಮ ಮಾಡುವುದಾಗಿ ಬಿಬಿಎಂಪಿ ಕಂಪನಿಗಳಿಗೆ ತಿಳಿಸಿತ್ತು. ಅಲ್ಲದೆ, ಜೂನ್ 30ರೊಳಗೆ ಎಲ್ಲಾ ಕಂಪನಿಗಳು ಅನಧಿಕೃತ ಒಎಫ್‌ಸಿ ಕೇಬಲ್ ಪ್ರಮಾಣ ಘೋಷಿಸಿಕೊಳ್ಳುವಂತೆ ಸೂಚನೆ ನೀಡಲಾಗಿತ್ತು.

ಇದೀಗ ಅಂತಿಮ ಗುಡುವು ಮುಗಿದಿದೆಯಾದರೂ ಬಿಬಿಎಂಪಿ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಕನಿಷ್ಠ ಎಚ್ಚರಿಕೆ ನೋಟಿಸ್ ಕೂಡ ಜಾರಿ ಮಾಡಿಲ್ಲ. ಹೀಗಾಗಿ ಕಳೆದ ಒಂದು ದಶಕದಿಂದ ಬಿಬಿಎಂಪಿಗೆ ಕೋಟ್ಯಂತರ ರೂ. ವಂಚಿಸಿರುವ ಕಂಪನಿಗಳ ಬಗ್ಗೆ ಬಿಬಿಎಂಪಿ ಈಗಲೂ ಮೃದು ಧೋರಣೆ ಮುಂದುವರಿಸಿರುವ ಬಗ್ಗೆ ಹಲವು ಟೀಕೆಗಳು ವ್ಯಕ್ತವಾಗಿವೆ.



ಪ್ರಸ್ತುತ ದಿನ ನಿತ್ಯದ ಜೀವನದಲ್ಲಿ ಬ್ರಾಡ್‌ಬ್ಯಾಂಡ್ ಸೇವೆ ಜನರಿಗೆ ಅತ್ಯವಶ್ಯಕ ಎನಿಸಿಕೊಂಡಿದೆ. ಹೀಗಾಗಿ ಅಂತರ್ಜಾಲ ಬಳಕೆದಾರರಿಗೆ ಸಮಸ್ಯೆ ಉಂಟಾಗಬಾರದು ಎಂಬ ಕಾರಣಕ್ಕೆ ಕಂಪನಿಗಳ ವಿರುದ್ಧ ಏಕಾಏಕಿ ಕ್ರಮ ಕೈಗೊಳ್ಳುತ್ತಿಲ್ಲ. ಮುಖ್ಯ ಕಾರ್ಯದರ್ಶಿಗಳು ಸಹ ಕ್ರಿಮಿನಲ್ ದೂರು ದಾಖಲಿಸದಂತೆ ಹೇಳಿದ್ದಾರೆ.

● **ಜಿ. ಕುಮಾರನಾಯಕ್**, ಬಿಬಿಎಂಪಿ ಆಯುಕ್ತ

**ಸಾವಿರಾರು ಕೋಟಿ ರೂ. ನಷ್ಟ:** ಬಿಬಿಎಂಪಿ ಒಎಫ್‌ಸಿ ಪರಿಶೀಲನಾ ಸಮಿತಿ ವರದಿ ಪ್ರಕಾರ ನಗರದಲ್ಲಿ 65,000 ಕಿ.ಮೀ. ರಸ್ತೆ ಅಗೆದು ಒಎಫ್‌ಸಿ ಕೇಬಲ್ ಅಳವಡಿಸಲಾಗಿದೆ. ಇದರಲ್ಲಿ ಬಿಬಿಎಂಪಿ ಅನುಮತಿ ಪಡೆದು ಪ್ರತಿ ವರ್ಷ ನೆಲಬಾಡಿಗೆ ದರ ಪಾವತಿಸುತ್ತಿರುವುದು ಕೇವಲ 7,500 ಕಿ.ಮೀ. ಕೇಬಲ್‌ಗೆ ಮಾತ್ರ. ಉಳಿದ 50 ಸಾವಿರಕ್ಕೂ ಹೆಚ್ಚು ಕಿ.ಮೀ. ಕೇಬಲ್‌ನಿಂದ ಬಿಬಿಎಂಪಿಗೆ ಹಣ ಬರುತ್ತಿಲ್ಲ. ಹೀಗಾಗಿ ಸಾವಿರಾರು ಕೋಟಿ ರೂ. ನಷ್ಟ ಆಗುವ ಜೊತೆಗೆ ರಸ್ತೆಗಳೂ ಹಾಳಾಗುತ್ತಿವೆ.

ನಗರದಲ್ಲಿ ಒಟ್ಟು 31 ಕಂಪನಿಗಳು ಒಎಫ್‌ಸಿ ಕೇಬಲ್ ಹಾಕಿವೆ. ಇವುಗಳಲ್ಲಿ 17 ಟೆಲಿಕಾಂ ಸೇವಾ ಕಂಪನಿಗಳೂ ಇವೆ. ಕೆಲ ಕಂಪನಿಗಳು ಈಗಾಗಲೇ 5 ಸಾವಿರ ಕಿ.ಮೀ. ಅನಧಿಕೃತ ಕೇಬಲ್ ಘೋಷಣೆ ಮಾಡಿಕೊಂಡಿದ್ದಾರೆ. ಉಳಿದ ಕಂಪನಿಗಳು ಕಳೆದ ಹತ್ತು ವರ್ಷಗಳಿಂದ ಬಿಬಿಎಂಪಿಗೆ ಪಾವತಿ ಮಾಡಬೇಕಿರುವ ವಾರ್ಷಿಕ ನೆಲ ಬಾಡಿಗೆ ದರ ಹಾಗೂ ರಸ್ತೆ ಅಗೆತ ದರ ಪಾವತಿಸದೆ ವಂಚಿಸುತ್ತಿವೆ.

- ● ಬಿಬಿಎಂಪಿ ವ್ಯಾಪ್ತಿಯಲ್ಲಿ 50 ಸಾವಿರ ಕಿ.ಮೀ. ಗೂ ಹೆಚ್ಚು ಅನಧಿಕೃತ ಒಎಫ್‌ಸಿ, 7 ಸಾವಿರ ಕಾಪರ್ ಕೇಬಲ್ ಅಳವಡಿಕೆ
- ● ಜೂನ್ 30ರೊಳಗೆ ಎಲ್ಲಾ ಕಂಪನಿಗಳು ಅನಧಿಕೃತ ಒಎಫ್‌ಸಿ ಕೇಬಲ್ ಪ್ರಮಾಣ ಘೋಷಿಸಿಕೊಳ್ಳುವಂತೆ ಸೂಚಿಸಿದ್ದ ಪಾಲಿಕೆ

ಪ್ರತಿ ಕಿ.ಮೀ. ಕೇಬಲ್‌ಗೆ ವಾರ್ಷಿಕ 850 ರೂ. ನೆಲಬಾಡಿಗೆ ದರ ನೀಡುವುದಾಗಿ ಕಂಪನಿಗಳೇ ಒಪ್ಪಿಗೆ ಸೂಚಿಸಿವೆ. ಜತೆಗೆ ಅನಧಿಕೃತ ಕೇಬಲ್‌ಗೆ ಪ್ರತಿ ಕಿ.ಮೀ. 600 ರೂ. ದಂಡ ಪಾವತಿಸಿ ಸಕ್ರಮಗೊಳಿಸಲು ಸೂಚನೆ ನೀಡಲಾಗಿತ್ತಾದರೂ ಕಂಪನಿಗಳು ಸಕ್ರಮಗೊಳಿಸಿಕೊಳ್ಳಲು ಮುಂದೆ ಬಂದಿಲ್ಲ. ಹೀಗಿದ್ದರೂ ಬಿಬಿಎಂಪಿ ಯಾವುದೇ ಕ್ರಮ ಜರುಗಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

**ಕಠಾರಿಯಾ ವರದಿಯಲ್ಲೂ ಉಲ್ಲೇಖ:** ಅನಧಿಕೃತ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಕೆ ನಿಯಂತ್ರಿಸುವಲ್ಲಿ ವಿಫಲವಾಗಿದ್ದ ಬಿಬಿಎಂಪಿ, ಇದೀಗ ನಿಯಮ ಉಲ್ಲಂಘಿಸಿದ ಕಂಪನಿಗಳಿಗೆ ದಂಡ ವಿಧಿಸದೆ ಸಕ್ರಮ ಮಾಡಿರುವುದರಿಂದ ಭಾರಿ ಆರ್ಥಿಕ ನಷ್ಟ ಉಂಟಾಗಿರುವುದಾಗಿ ಐಎಎಸ್ ಅಧಿಕಾರಿ ರಾಜೇಂದ್ರ ಕುಮಾರ್ ಕಠಾರಿಯಾ ವರದಿಯೂ ಹೇಳಿತ್ತು.

ಒಎಫ್‌ಸಿ ಕೇಬಲ್ ಬಗ್ಗೆ ಸಮರ್ಪಕ ಮೇಲ್ವಿಚಾರಣೆ ನಡೆಸುವಲ್ಲಿ ಪಾಲಿಕೆ ಅಧಿಕಾರಿಗಳು ವಿಫಲರಾಗಿದ್ದಾರೆ. ಇದರಿಂದ ಅನಧಿಕೃತವಾಗಿ ಕೇಬಲ್ ಅಳವಡಿಕೆ ಹೆಚ್ಚಾಗಿ ರಸ್ತೆಗಳು ಹಾಳಾಗಿವೆ. ಅನಧಿಕೃತ ಕೇಬಲ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಂಡಿಲ್ಲ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಪಾಲಿಕೆಗೆ ಸೇರಿದ ರಸ್ತೆ, ಪಾದಚಾರಿ ಮಾರ್ಗದಲ್ಲಿ ಕೇಬಲ್ ಅಳವಡಿಕೆಯಿಂದ ಸಂಸ್ಥೆಗಳು ಪಡೆಯುವ ಪ್ರಯೋಜನ, ಆರ್ಥಿಕ ಲಾಭ ಗಣನೆಗೆ ತೆಗೆದುಕೊಳ್ಳದೆ ಅನಧಿಕೃತ ಕೇಬಲ್‌ಗಳನ್ನು ಸಕ್ರಮಗೊಳಿಸಲಾಗುತ್ತಿದೆ. ಪಾಲಿಕೆ ಸ್ವತ್ತಿನಲ್ಲಿ ಅಕ್ರಮವಾಗಿ ಕೇಬಲ್ ಅಳವಡಿಸಿ ಗಂಭೀರ ಲೋಪ ಎಸಗಿದ ಸಂಸ್ಥೆಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡುಬಂದಿದೆ ಎಂದೂ ವರದಿ ತಿಳಿಸಿತ್ತು.

**ಪರಿಶೀಲನೆ ಮಾಡದೆ ಸಕ್ರಮ:** ಕಂಪನಿಗಳು ಅನಧಿಕೃತವಾಗಿ ಕೇಬಲ್ ಅಳವಡಿರುವ ಬಗ್ಗೆ ಸ್ವಯಂಘೋಷಣೆ ಮಾಡಿಕೊಂಡ ವಿವರದಂತೆ ನಿಯಮಬದ್ಧಗೊಳಿಸಲಾಗಿದೆ. ಆದರೆ, ಆ ವಿವರವನ್ನು ಪಾಲಿಕೆ ಅಧಿಕಾರಿಗಳು ಪರಿಶೀಲಿಸಿಲ್ಲ. ಅಲ್ಲದೆ, ಕೇಬಲ್ ಅಳವಡಿಕೆ ಬಳಿಕ ದುರಸ್ತಿ ನಿಯಮ ಪ್ರಕಾರವೇ ನಡೆದಿದೆಯೇ ಎಂಬುದನ್ನೂ ಪರಿಶೀಲಿಸಿಲ್ಲ. ಈ ಕ್ಷಣದವರೆಗೆ ನಗರದಲ್ಲಿ ಅನಧಿಕೃತ ಹಾಗೂ ಅಧಿಕೃತವಾಗಿ ಒಎಫ್‌ಸಿ ಅಳವಡಿಸಿರುವ ಮಾಹಿತಿ ಪಾಲಿಕೆಯಲ್ಲಿಲ್ಲ. ಒಎಫ್‌ಸಿ ಅಳವಡಿಕೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ನೀತಿ ಇಲ್ಲವೇ ಮಾರ್ಗಸೂಚಿಯಿಲ್ಲ. ಕೇಬಲ್ ಜಾಲದ ಮಾಹಿತಿಯನ್ನೂ ಕಲೆ ಹಾಕಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿತ್ತು.